ಅಧ್ಯಕ್ಷರು .— ಕಾರ್ಪೊರೇಷನ್‌ಗೆ ಪುನಃ ಹೋಗುವುದಾದರೆ ಕನ್‌ಸಿಡರ್ ಮಾಡುತ್ತೇವೆಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ.

ಶ್ರೀ ಎ. ರಾಮಚಂದ್ರ .—ಸ್ವಾಮಿ, ನಾನು ಹೇಳಬೇಕಾದರೆ ಅವರನ್ನು ಆ ಡಿಪಾರ್ಟ್‌ಮೆಂಟ್‌ಗೇ ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಈ ರೀತಿ ಮೋಸ ಮಾಡಿ ಬೇರೆಯವರನ್ನು ತೆಗೆದುಕೊಳ್ಳುತ್ತಾರಲ್ಲ ಇದು ಸರಿಯೇ?

ಅಧ್ಯಕ್ಷರು ,— ಅವರಿಗೆ ಮೊದಲೇ ಹೋಗುತ್ತೀರಾ ಅಥವಾ ಹೇಗೆ ಎಂದು ಕೇಳಿರುತ್ತಾರೆ. ಕಾರ್ಪೊರೇಷನ್‌ಗೆ ಹೋಗುತ್ತೇವೆಂದು ಹೇಳಿದಮೇಲೆ ಬೇರೆಯವರನ್ನು ತೆಗೆದುಕೊಂಡಿದ್ದಾರೆ. ಅದನ್ನೇ ಅವರು ಹೇಳುತ್ತಾ ಇರುವುದು.

ಶ್ರೀ ಎ. ರಾಮಚಂದ್ರ .— ಸ್ವಾಮಿ, ತಾವು ಉತ್ತರ ಕೊಟ್ಟದ್ದು ಒಳ್ಳೆಯದು ಆಯಿತು.

ಅಧ್ಯಕ್ಷರು .— ಅವರೇ ಹೇಳಿದ್ದಾರಲ್ಲ ಹಾಗಂತ.

ಶ್ರೀ ಎ. ರಾಮಚಂದ್ರ .— ಅವರು ಹೇಳಿದ್ದನ್ನೇ ಹೇಳುತ್ತಾರೆ, ಅವರಿಗೆ ಬೇರೆ ಏನೂ ಹೇಳುವುದಕ್ಕೆ ಗೊತ್ತಾಗುವುದಿಲ್ಲ.

ಅಧ್ಯಕ್ಷರು .— ನೀವು ಪ್ರಶ್ನೆ ಏನು ಹಾಕಬೇಕೋ ಅದನ್ನು ಹಾಕಿ, ಹಾಗೆಲ್ಲಾ ನೀವು ಕಾಮೆಂಟ್ ಮಾಡಿಬೇಡಿ.

ಶ್ರೀ ಜಿ.ಕೆ, ತಕ್ಕೇಡ್ . — ಮಾನ್ಯ ಮಂತ್ರಿಯವರು ಕನ್ನಡದಲ್ಲಿ ಉತ್ತರವನ್ನು ಕೊಡಲಿ. ಇಂಗ್ಲೀಷ್‌ನಲ್ಲಿ ಅವರು ಉತ್ತರ ಕೊಡುವುದರಿಂದ ಅವರಿಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು .— ನೀವು ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಪವಾರ್.– ಮಾನ್ಯ ಅಧ್ಯಕ್ಷರೇ ಇವತ್ತು ಅವರಿಗೆ ಕಾರ್ಪೊರೇಷನ್‌ಗೆ ವಾಪಸ್ಸು ಹೋಗ ಬೇಕೆಂದು ಇಚ್ಛೆ ಇದ್ದರೆ ಅದನ್ನು ನಾವು ವಿಚಾರ ಮಾಡುತ್ತೇವೆ.

ಶ್ರೀ ಎ. ರಾಮಚಂದ್ರ .— ಅವರಿಗೆ ಕಾರ್ಪೋರೇಷನ್‌ಗೆ ಬರುವುದಕ್ಕೆ ಇಚ್ಛೆ ಇರಬಹುದು. ಆದರೆ ಅಲ್ಲಿ ೪–೫ ವರ್ಷ ಅವರು ಕೆಲಸ ಮಾಡಿದನಂತರ ತಿರುಗಿ ನೀವು ಅವರನ್ನು ಅಲ್ಲಿಗೇ ಕಳಿಸುತ್ತೀರಿ. ಅವರಿಗೆ ಜವಾಬ್ದಾರಿ ಬೇಕು. ಇನ್ನುಮುಂದೆ ನಿಮ್ಮನ್ನು ಕೈಬಿಡುವುದಿಲ್ಲ, ನಿಮ್ಮನ್ನು ಪರ ಊರಿಗೆ ಕಳುಹಿಸುವುದಿಲ್ಲ ಎನ್ನುತಕ್ಕಂಥ ಒಂದು ಆಶ್ವಾಸನೆಯನ್ನು ನೀವು ಕೊಟ್ಟರೆ ಅವರು ಬರುತ್ತಾರೆ, ಅವರಿಗೆ ಕಾರ್ಪೊರೇಷನ್‌ಗೆ ಬರುವುದಿಲ್ಲ ಅಂತ ಏನೂ ಇಲ್ಲ.

SRI D.B.PAWAR .— Sir, I did not understand his question.

Waiving of Irrigation Loans in Tumkur District

474 SRI V. L. SHIVAPPA (Tiptur).—Will the Minister for Co-operation be pleased to state.—

(a) the number of representations that are pending either for Waiving the irrigation loans in respect of Wells which are not fit for use (without fetching sufficient water) or requesting for payment of Compensation in Tumkur District;

(b) out of this, the number of irrigation Wells that are more than a year ?

SRI H. C. SRIKANTAIAH (Minister for Co-operation).—

(a) 541 representations are pending disposal requesting for Waiving of loans relating to ten Primary Land Development Banks in Tumkur District.

(b) Out of 541 applications, there are 282 irrigation Wells which are more than a year.

ಶ್ರೀ ವಿ. ಎಲ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿರುವ ರೀತಿಯನ್ನು ನೋಡಿದರೆ ಇಲ್ಲಿ ಪ್ರಶ್ನೆ ಹಾಕಿ ಉತ್ತರವನ್ನು ಪಡೆಯುವುದು ಬಹಳ ಕಷ್ಟವಾಗಿದೆ. ಇದು ಸರ್ಕಾರಕ್ಕೂ ಕೂಡ ಕಷ್ಟವಾಗಿದೆ. ಈ ವಿಚಾರದಲ್ಲಿ ತುಮಕೂರು ಜಿಲ್ಲೆಯಲ್ಲಿ ಒಟ್ಟು ೫೪೧ ಅಪ್ಲಿಕೇಷನ್ಸ್ ಗಳು ಬಂದಿವೆ. ಅದು ಬಂದು ೩ ವರ್ಷ, ೪ ವರ್ಷ ಆಗಿರತಕ್ಕಂಥ ಸುಮಾರು ೨೮೨ ಅಪ್ಲಿಕೇಷನ್‌ಗಳು ಪೆಂಡಿಂಗ್ ಇದೆ. ಇದನ್ನು ನೋಡಿದರೆ ಈ ರೀತಿ ದೇಶಾದ್ಯಂತ ಪೆಂಡಿಂಗ್ ಇರಬಹುದು ಎಂದು ಅರ್ಥ ವಾಗಂತ್ತಿದೆ. ಅವರ ವಿಚಾರದಲ್ಲಿ ಯಾವ ರೀತಿ ಅವರಿಗೆ ಸಹಾಯ ಮಾಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಈ ವಿಚಾರದಲ್ಲಿ ಬಹಳ ಬೇಗ ತೀರ್ಮಾನ ಮಾಡದೇ ಹೋದರೆ ಬಹಳ ಕಷ್ಟವಾಗು ತ ದೆ. ಈ ಬಗ್ಗೆ ಡೆಪ್ಯುಟಿ ಕಮಿಷನರ್‌ರವರಿಗೆ ಅಧಿಕಾರವನ್ನು ಕೊಟ್ಟಿದ್ದರೂ ಕೂಡ ಯಾರೂ ಇದನ್ನು ಪೂರ್ತಿ ಮಾಡುವ ಸನ್ನಿವೇಶದಲ್ಲಿ ಇಲ್ಲ ; ಆ ಜನರಿಗೆ ಕಷ್ಟವಾಗಿರತಕ್ಕಂಥಾದ್ದು ಮಾನ್ಯ ಸಚಿವರಿಗೂ ಗೊತ್ತಿದೆ. ಅದು ನನಗೊಬ್ಬನಿಗೇ ಗೊತ್ತಿರುವುದಲ್ಲ. ಮಾನ್ಯ ಸಚಿವರು ಆದಷ್ಟು ಬೇಗ ೩ ತಿಂಗಳೊಳಗೆ ಅಷ್ಟು ಅರ್ಜಿಗೂ ಉತ್ತರ ಕೊಡುವುದಕ್ಕೆ ಸಾಧ್ಯವಿದ್ದು, ಅಷ್ಟರಲ್ಲಿ ಅವರಿಗೆ ಸಾಲ ವಜಾ ಮಾಡಿಕೊಡು ತ್ತೇನೆ ಎನ್ನತಕ್ಕಂಥ ಉತ್ತರವನ್ನು ಹೇಳಿದರೆ ಸಾಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ರಾಜ್ಯದ ನಾನಾ ಭಾಗಗಳಿಂದ ನಮಗೆ ದೂರು ಬಂದಿದೆ. ಈ ಸಮಸ್ಯೆಯನ್ನು ಸರ್ಕಾರ ಪೂರ್ಣವಾಗಿ ಅರ್ಥ ಮಾಡಿಕೊಂಡಿದೆ. ೨೪ನೇ ತಾರೀಖಿನ ದಿವಸ ಈ ವಿಚಾರದಲ್ಲಿ ಆಫೀಸರ್ಸ್ ಮೀಟಿಂಗನ್ನು ಕರೆಯಬೇಕೆಂದು ನಾವು ಈಗಾಗಲೇ ಒಂದು ತಾರೀಖಿನ್ನು ಗೊತ್ತು ಮಾಡಿದ್ದೇವೆ. ಆದ್ದರಿಂದ ಯಾವ ರೀತಿ ಈ ಸಾಲವನ್ನು ಸಂಭವಾಗಿ ಇತ್ಯರ್ಥ ಮಾಡಬಹುದು ಎಂಬುದನ್ನು ಸರ್ಕಾರ ತೀರ್ಮಾನ ಮಾಡುತ್ತದೆ.

ಶ್ರೀ ವಿ. ಮಾಸಿಯಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಆ ರೀತಿ ಉತ್ತರ ಹೇಳಿ ದ್ದಾರೆ. ಸಂತೋಷ. ಆದರೆ ಈ ಸಾಲಗಾರರು ಏನಿದ್ದಾರೆ ಅವರ ಮೇಲೆ ಈಗಾಗಲೇ ತೀವ್ರ ವಸೂಲಿ ಕ್ರಮಗಳನ್ನು ತೆಗೆದುಕೊಂಡಿರತಕ್ಕಂಥಾದ್ದು ಇದೆ. ಮಾನ್ಯ ಮಂತ್ರಿಯವರು ತೀರ್ಮಾನ ಕೊಟ್ಟಮೇಲೆ ಕೂಡ ಆ ತೀರ್ಮಾನದಿಂದ ಯಾವುದೇ ಉಪಯೋಗ ಆಗದೇ ಇರತಕ್ಕಂಥ ಪರಿಸ್ಥಿತಿ ಬರತಕ್ಕಂಥ ಸಂದರ್ಭ ಇದೆ. ಈ ಬಗ್ಗೆ ಮಾನ್ಯ ಮಂತ್ರಿಯವರು ಒಂದು ತೀರ್ಮಾನ ತೆಗೆದುಕೊಳ್ಳುವವರೆಗೆ ಸಾಲ ವಸೂಲಿ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ ಅವರು ಒಂದು ಸಂದೇಶವನ್ನು ಕೊಡುತ್ತಾರೆಯೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆ ತೀರ್ಮಾನ ಏನಾಗುತ್ತದೆ ಎಂಬುದು ನನ್ನೂ ಗೊತ್ತಿಲ್ಲ. ೨೪ನೇ ತಾರೀಖಿಗೆ ಆದರ ಸಾಧಕ ಭಾಧಕಗಳನ್ನು ನಾವು ವಿಚಾರ ಮಾಡಿ, ಆದನ್ನು ಯಾವ ರೀತಿ ಸುಲಭ ವಾಗಿ ಇತ್ಯರ್ಥ ಮಾಡಬಹುದು, ಅವರಿಗೆ ಏನು ಏನಾಯಿತಿ ದೊರೆಯುತ್ತಾ ಇಲ್ಲ, ಅದು ದೊರೆಯುವು ದಕ್ಕೆ ಯಾವರೀತಿ ಮಾಡಬಹುದು, ಎಷ್ಟು ಶೀಘ್ರವಾಗಿ ಆದನ್ನು ಮಾಡುವುದಕ್ಕೆ ಸರ್ಕಾರ ಯಾವ ಕಾರ್ಯಕ್ರಮವನ್ನು ಹಾಕಿಕೊಳ್ಳಬಹುದು ಎನ್ನತಕ್ಕಂಥಾದ್ದನ್ನೆಲ್ಲಾ ನಾವು ತೀರ್ಮಾನ ಮಾಡುತ್ತೇವೆ. ೨೪ನೇ ತಾರೀಖಿಗೆ ಇನ್ನು ಕೇವಲ ೩ ದಿವಸ ಮಾತ್ರ ಇದೆ. ಈ ಬಗ್ಗೆ ನಾವು ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಿಯವರೆಗೂ ಯಾರಿಂದಲೂ ಸಾಲವನ್ನು ವಸೂಲು ಮಾಡುವುದು ಬೇಡ ಎನ್ನತಕ್ಕಂಥಾದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಯಾರ್ಯಾರು ನಿಜವಾಗಿಯೂ ನಿಯಮವನ್ನು ಅನುಸರಿಸಿ ಅರ್ಜಿಯನ್ನು ಸಲ್ಲಿಸಿದ್ದಾರೆ ಅವರಿಗೆ ಸಾಲ ವಜಾ ಮಾಡಿಸುವುದಕ್ಕೆ ನಾನು ಯೋಚನೆ ಮಾಡುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ಕೆಲವು ಜನ ಬಡವರು ಬಾವಿ ತೆಗೆದಿದ್ದಾರೆ. ಆವೆಲ್ಲಾ ಫೈಲ್ಯೂರ್ ಆಗಿವೆ, ಬಾವಿ ಫೈಲ್ಯೂರ್ ಆಗಿವೆ ಎಂದು ಜಿಯಾಲಾಜಿಸ್ಟ್ ಕಡೆಯಿಂದ ಸರ್ಟಿಫಿಕೇಟ್

ಮಾಡಿಸಿ ಕೊಟ್ಟಿದ್ದರೂ ಕೂಡ ಪಿ.ಎಲ್.ಡಿ. ಬ್ಯಾಂಕ್‌ನವರು ಏನು ಮಾಡಿದ್ದಾರೆ ಎಂದರೆ ಈ ಸರ್ಟಿಫಿಕೇಟ್‌ನ್ನು ನಾವು ಒಪ್ಪುವುದಿಲ್ಲ, ಸರ್ಕಾರದಿಂದ ನಮಗೆ ಅನುಮತಿ ಬರುವತನಕ ನಾವು ಸಾಲ ವಸೂಲಿ ಮಾಡದೇ ಇರುವುದಕ್ಕಾಗುವುದಿಲ್ಲ, ಎಂದು ಹೇಳಿ ಸಾಲವನ್ನು ವಸೂಲು ಮಾಡುತ್ತಿದ್ದಾರೆ. ಆ ಬಡ ಹರಿಜನರು ಕೆಲವರು ಈ ವಿಚಾರವನ್ನು ನನ್ನ ಕಡೆಗೆ ಬಂದು ಹೇಳಿದ್ದಾರೆ ಮತ್ತು ಅವರೆಲ್ಲಾ ಕೋರ್ಟಿಗೆ ಹೋಗಿ ಸ್ಟೇ ತರತಕ್ಕಂಥ ಸಂದರ್ಭ ಬಂದಿದೆ. ನೀವು ೨೪ನೇ ತಾರೀಖಿನ ದಿವಸ ಈ ಬಗ್ಗೆ ಏನಾದರೂ ತೀರ್ಮಾನವನ್ನು ತೆಗೆದುಕೊಳ್ಳಿ. ಇವತ್ತು ಆ ಬಡಜನರ ಎತ್ತುಗಳನ್ನು ಮತ್ತು ಮನೆಯಲ್ಲಿರತಕ್ಕಂಥ ಪದಾರ್ಥಗಳನ್ನು ಈಚೆಗೆ ತೆಗೆದುಕೊಂಡು ಬಂದು ಆ ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಹಾಕಿಕೊಂಡಿದ್ದಾರೆ. ಅವರು ಸಾಲ ತೆಗೆದುಕೊಂಡು ಬಾವಿ ತೆಗೆದಮೇಲೆ, ಅದಕ್ಕೆ ತಕ್ಕಪ್ರತಿಫಲ ಇಲ್ಲವಾಗಿದೆ. ಅವರು ಈ ಸಾಲವನ್ನು ಕೊಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಇಂತಹವರಿಂದ ಸದ್ಯಕ್ಕೆ ಸಾಲ ವಸೂಲು ಮಾಡದ ರೀತಿಯಲ್ಲಿ ತಡೆ ಕೊಡತಕ್ಕಂಥ ಕ್ರಮವನ್ನು ತೆಗದುಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಿ. ಮಸಿಯಪ್ಪ.—ಮಾನ್ಯ ಸಚಿವರು ಇದರಲ್ಲಿರತಕ್ಕಂಥ ಒಂದು ವಿಚಾರವನ್ನು ಗಮನಿಸಬೇಕು. ಇದರಲ್ಲಿ ಒಂದು ಅನಾಮಲಿ ಇದೆ. ಅದೇನೆಂದರೆ ಇತ್ತೀಚೆಗೆ ತಾವು ಕೊಟ್ಟಿರತಕ್ಕಂಥ ಪರಿಹಾರದ ಆರ್ಡರ್‌ನಲ್ಲಿ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ನವರಿಂದ ಒಪೀನಿಯನ್ ತಗೆದುಕೊಂಡು ಯಾರು ಬಾವಿ ತೆಗೆಸಿರುತ್ತಾರೋ ಅವರಿಗೆ ಮಾತ್ರ ಪರಿಹಾರ ಸಿಕ್ಕುತ್ತದೆ ಎನ್ನತಕ್ಕಂಥ ಅಂಶ ಇದೆ. ಆಡಮಾನ್ ಬ್ಯಾಂಕ್‌ನ ಸಾಲ ಕೊಡತಕ್ಕಂಥ ಅವಧಿ ಶುರುವಾದ ಮೇಲೆ ಪ್ರಾರಂಭದಲ್ಲಿ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟಿನವರ ಒಪೀನಿಯನ್ ತೆಗೆದುಕೊಳ್ಳಬೇಕೆಂದು ಕಂಡಿಷನ್ ಇರಲಿಲ್ಲ. ಅವತ್ತು ಏನು ನಿಯಮಗಳು ಜಾರಿಯಲ್ಲಿದ್ದುವೋ ಆ ನಿಯಮಗಳನ್ನು ಅನುಸರಿಸಿಕೊಂಡು ಅವರೆಲ್ಲಾ ಬಾವಿಗಳನ್ನು ತೆಗೆದಿದ್ದಾರೆ. ಇವತ್ತು ಹೊಸದಾಗಿ ಸೇರಿಸಿರತಕ್ಕಂಥ ಕಂಡಿಷನ್‌ಗಳು ಹಿಂದಿನ ಸಾಲಗಾರರಿಗೆ ಆಡ್ಡ ಆಗುವಾರದು ಎನ್ನತಕ್ಕಂಥ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಆದ್ದರಿಂದ ಅವರೆಲ್ಲರಿಗೆ ಸಾಲ ವಜಾ ಮಾಡುವುದಕ್ಕೆ ತಾವು ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದು ಅತೀ ಮೂಲಭೂತವಾದ ಪ್ರಶ್ನೆ. ಅವತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರಾಗಲೀ ಅಥವಾ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ನವರಾಗಲೀ ಸ್ಥಳ ಪರಿಶೀಲನೆ ಮಾಡಿ, ಅಲ್ಲಿ ನೀರು ಬರುತ್ತದೆಂದು ಖಾತ್ರಿಯಾದಮೇಲೆ, ಬಾವಿ ತೆಗೆಯುವುದಕ್ಕೆ ಪರ್ಮಿಷನ್ ಕೊಟ್ಟಿದ್ದರೆ—ಅಂತಹ ಕಡೆ ಬಾವಿಗಳನ್ನು ತೆಗೆದಿದ್ದರೆ. ಅಂತಹ ಕೇಸ್‌ಗಳನ್ನು ನಾವು ಸುಲಭವಾಗಿ ಇತ್ಯರ್ಥ ಮಾಡಬಹುದು. ಆದರೆ ಅದು ಹಾಗಲ್ಲದೇ, ನೀರು ಬರದೇ ಇರುವ ಕಡೆ ಬಾವಿ ತೆಗೆದು ವಿನಾಯಿತಿಯನ್ನು ಕೊಡಿ ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಏನೇ ಆದರೂ ನಾವು ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಯದೇವರಾಜ ಅರಸ್.—ಸ್ವಾಮಿ, ಮಾನ್ಯ ಮಂತ್ರಿಯವರು ೨ ವಿಚಾರವನ್ನು ಹೇಳಿದರು: ನನಗೆ ಈ ವಿಚಾರದಲ್ಲಿ ಕ್ಲಾರಿಫಿಕೇಷನ್ಸ್ ಬೇಕು. ಜಿಯಾಲಾಜಿಕಲ್ ಸರ್ವೆ ಮಾಡದೇ ಅಲ್ಲಿ ತೆಗೆದಿರತಕ್ಕಂಥ ಬಾವಿಗಳ ಮೇಲಿನ ಸಾಲಕ್ಕೆ ವಜಾ ಕೊಡಬೇಕೇ ಅಥವಾ ಬಿಡಬೇಕೇ ಎನ್ನತಕ್ಕಂಥ ವಿಚಾರದಲ್ಲಿ ತೀರ್ಮಾನ ಮಾಡಬೇಕಾಗಿದೆ. ಆದರೆ ಜಿಯಾಲಾಜಿಕಲ್ ಸರ್ವೆ ಮಾಡಿ ಬಾವಿ ತೆಗೆದಿರತಕ್ಕಂಥಾದಕ್ಕೆ ವಜಾ ಕೊಡಬೇಕಾಗಿದೆ ಎಂದು ಅವರು ಹೇಳಿದರು. ಎಷ್ಟೋ ಕಡೆ ಜಿಯಾಲಾಜಿಕಲ್ ಸರ್ವೆ ಮಾಡಿ, ಅವರು ತೋರಿಸಿದ ಕಡೆ ಕುಡಿಯುವ ನೀರಿನ ಬಾವಿಗಳನ್ನು ತೆಗೆದರೂ ಕೂಡ ಅಲ್ಲಿ ನೀರು ಬರಲಿಲ್ಲ. ಈ ಜಿಯಾಲಾಜಿಕಲ್ ಸರ್ವೆ ಮಾಡತಕ್ಕಂಥ ವ್ಯವಸ್ಥೆ ಬರುವುದಕ್ಕಿಂತ ಪಂಚಾಂಚಿತವಾಗಿ ಬಾವಿ ತೆಗೆಸಿ--ಆದರಲ್ಲಿ ನೀರು ಬರದೇ ಹೋದಂಥ ಪರಿಸ್ಥಿತಿಯಲ್ಲಿ ಅಂತಹವರಿಗೆ ಎಗ್ಸೆಂಪ್‌ಷನ್ ಕೊಟ್ಟಿಲ್ಲ. ಜೊತೆಗೆ ವ್ಯಾಮುಖ್ಯವಾಗಿ ಈ ವಿಚಾರದಲ್ಲಿ ೬ ತಿಂಗಳ ಒಳಗೆ ಅರ್ಜಿ ಹಾಕಿಕೊಳ್ಳಬೇಕು ಎಂದು ಹೇಳುತ್ತಾರೆ. ಅಷ್ಟರೊಳಗೆ ಅರ್ಜಿ ಹಾಕಿಕೊಳ್ಳಲಿಲ್ಲ ಎನ್ನತಕ್ಕಂಥ ನೆಪದ ಮೇಲೆ ಸಾಲ ವಜಾ ಮಾಡತಕ್ಕಂಥಾದ್ದನ್ನು ಮುಂದಕ್ಕೆ ಹಾಕುತ್ತಿದ್ದಾರೆ. ಈ ಬಾವಿ ತೆಗೆಯತಕ್ಕಂಥಾದ್ದರಲ್ಲಿ ಯಾವುದು ನಿಜವಾಗಿ ಸಫಲವಾಗಲಿಲ್ಲ, ಅಂಥಾದ್ದನ್ನು ಪರಿಶೀಲನೆ ಮಾಡಿ ಅಂತಹ ರೈತರಿಗೆ ಪರಿಹಾರವನ್ನು ಕಂಡುಹಿಡಿಯಲು ಮಾನ್ಯ ಮಂತ್ರಿಯವರು ಏನಾದರೂ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಿಜವಾಗಿಯೂ ಕೂಡ ರೈತನ ಬಾವಿ ಫೈಲ್ ಆಗಿದ್ದರೆ, ಡಿಪಾರ್ಟ್‌ಮೆಂಟ್‌ನವರು ಸ್ಥಳ ತೋರಿಸಿ, ಅಲ್ಲಿ ಬಾವಿಯನ್ನು ತೆಗೆದಮೇಲೆ ನೀರು ಬರದೇ ಹೋಗಿದ್ದರೆ ಅಂಥಾದ್ದನ್ನು ನಾವು ಪರಿಗಣಿಸುತ್ತೇವೆ.

ಶ್ರೀ ಕೆ. ಮಲ್ಲಪ್ಪ.—ಸ್ವಾಮಿ. ಇದರಲ್ಲಿ ಏನಾಗುತ್ತದೆ ಎಂದರೆ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಜಾಗ ತೋರಿಸಿದ ಕಡೆಯಲ್ಲಿ ಬಾವಿಯನ್ನು ತೆಗೆದಿದ್ದರೂ ಕೂಡ, ಆದರಲ್ಲಿ ನೀರು ಬಂದರೂ ಕೂಡ ಆದರ ಸುತ್ತಲಿನ ಭೂಮಿಯಲ್ಲಿ ಬ್ಲಾಕ್ ಕಾಟನ್ ಸಾಯಲ್ ಇರುತ್ತದೆ, ಅಂತಹ ಸಂದರ್ಭದಲ್ಲಿ ನೀರು ಸೀಪೇಜ್ ಆಗುತ್ತದೆ, ಎಷ್ಟು ಸಾವಿರ ಖರ್ಚು ಮಾಡಿದರೂ ಬಾವಿಯೊಳಕ್ಕೆ ಕುಸಿದು ಬಿದ್ದಂಥ ಮಣ್ಣನ್ನು ಹೊರಕ್ಕೆ ತೆಗೆಯುವುದಕ್ಕಾಗುವುದಿಲ್ಲ. ಇಂತಹ ಸಂದರ್ಭಗಳೂ ಇವೆ. ಎಷ್ಟೋ ಬಾವಿಗಳು ಹೀಗಾಗಿವೆ. ಅದನ್ನೂ ಕೂಡ.....

ಅಧ್ಯಕ್ಷರು.—ಗೌರ್ನಮೆಂಟ್ ಆರ್ಡರ್‌ನಲ್ಲಿ ಅದರ ಬಗ್ಗೆ ಡೆಫನಿಷನ್ ಹೇಳಿದ್ದಾರೆ. ಫೈಲ್ ಆಗಿರತಕ್ಕಂತಹ ವೆಲ್‌ಗಳ ಬಗ್ಗೆ ಯಾವ ಯಾವ ನಿಯಮಗಳನ್ನು ಅನುಸರಿಸಬೇಕು ಎಂಬುದು ಸರ್ಕಾರಿ ಆದೇಶದಲ್ಲಿ ಇದೆ. ಅದನ್ನು ಮಾನ್ಯ ಸದಸ್ಯರು ನೋಡಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿ ಜಿಯಾಲಾಜಿಕಲ್ ಇಲಾಖೆಯವರು ಸರ್ವೆ ಮಾಡಿದ ನಂತರ ಈ ಒಂದು ನಿಯಮ ಬಹಳ ತಡವಾಗಿ ಬಂದಿದೆ. ಮೊದಲು ಪಿ.ಎಲ್.ಡಿ. ಬ್ಯಾಂಕ್‌ನವರು ಹಳ್ಳಿಗಳಲ್ಲಿರತಕ್ಕಂತಹ ರೈತರಿಗೆ ಸಾಲವನ್ನು ಮಂಜೂರು ಮಾಡಿದ ಮೇಲೆ ಆ ರೈತರು ಜಿಯಾಲಾಜಿಕಲ್ ಸರ್ವೆಯನ್ನು ಮಾಡಿಸದೆ ಹಳ್ಳಿಗಳಲ್ಲಿರತಕ್ಕಂತಹ ತಜ್ಞರ ಮೂಲಕ ಜಮೀನು ತೋರಿಸಿದಂತಹ ಸ್ಥಳದಲ್ಲಿ ಬಾವಿಯನ್ನು ತೋಡಿಸುತ್ತಾರೆ. ಅಂತಹ ಬಾವಿಗಳಲ್ಲಿ ನೀರು ಬರುವುದಿಲ್ಲ, ಆಗ ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರವರು ಹೋಗಿ ನೋಡಿಕೊಂಡು ಬಂದು, ಅಲ್ಲಿ ನೀರು ಬಂದಿಲ್ಲ ಎಂದು ಅವರು ವರದಿ ಮಾಡಿದರೆ, ಅಂತಹ ರೈತರಿಗೆ ಸರ್ಕಾರದವರು ಏನಾದರೂ ರಿಯಾಯ್ತಿ ಕೊಡುವುದರ ಬಗೆ ತಿದ್ದುಪಡಿಯನ್ನು ಮಾಡುವುದಕ್ಕೆ ಸಾಧ್ಯವಿದೆಯೆ ?

ಎರಡನೆಯದಾಗಿ, ಅರ್ಥಮಂತ್ರಿಗಳಿಗೆ ಈ ಬಗ್ಗೆ ನಾವು ಒಂದು ಪತ್ರವನ್ನು ಬರೆದಿದ್ದೇವೆ. ಅದು ಏನೆಂದರೆ ಜಿಯಾಲಾಜಿಕಲ್ ಸರ್ವೆ ಮಾಡಿಸದೆ ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿ ಬಾವಿಯನ್ನು ತೋಡಿಸಿರುತ್ತಾರೆ. ಅಂತಹ ಬಾವಿಗಳಲ್ಲಿ ನೀರು ಬರುವುದಿಲ್ಲ. ಅಂತಹವರಿಗೆ ಸರ್ಕಾರದವರು ಏನಾದರೂ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೀರಾ ?

ಮೂರನೆಯದಾಗಿ, ರೈತರು ಬಾವಿಗಳನ್ನು ತೋಡಿಸಿದ್ದರೂ ಕೂಡ ಬಾವಿಗಳಲ್ಲಿ ಅಲ್ಪಸ್ವಲ್ಪ ನೀರಿರುತ್ತದೆ. ಇದರಿಂದ ರೈತರಿಗೆ ಏನೂ ಪ್ರಯೋಜನವಾಗುವುದಿಲ್ಲ. ಅಂತಹ ರೈತರಿಗೂ ಕೂಡ ಏನಾದರೂ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿದೆಯೆ ?

SRI H. C. SRIKANTAIAH.—Sir, after a detailed consideration with the Department of Mines & Geology a Government Order has already been issued by the Revenue Department to the effect that certificate from Geologist need not be a pre-condition for grant of relief where such certificates were initially insisted by them. This has already been given.

ಶ್ರೀ ವಿ. ಎಲ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಎಂದರೆ ಫೈನಲ್ ಬಿಲ್ ಕೂಡ ಕೊಟ್ಟಿದ್ದು ಆಗಿದೆ. ಅಂತಹ ಕೆಲವು ಬಾವಿಗಳಲ್ಲಿ ನೀರೇ ಇಲ್ಲ. ಸರ್ಕಾರದವರು ರೈತರಿಗೆ ಕೊಟ್ಟಿರುವ ಸಾಲವನ್ನು ವಸೂಲು ಮಾಡದೆ ಇರುವಂತೆ ಸರ್ಕಾರಕ್ಕೆ ಅನೇಕ ಅರ್ಜಿಗಳು ಹಾಕಿಕೊಂಡಿದ್ದಾರೆ. ಆ ಅರ್ಜಿಗಳು ತೀರ್ಮಾನವಾಗುವವರೆಗೂ ರೈತರಿಗೆ ಸರ್ಕಾರದವರು ಹಿಂಸೆಯನ್ನು ಕೊಡದೆ, ಅವರ ಮನೆಗಳನ್ನು ಜಪ್ತಿ ಮಾಡದೆ ವಸೂಲಿಯನ್ನು ತಡೆಹಿಡಿಯುವಂತೆ ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶವನ್ನು ಕೊಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ಅದನ್ನು ಪರಿಶೀಲನೆ ಮಾಡುತ್ತೇನೆ ಎಂದು ನಾನು ಈಗಾಗಲೇ ಹೇಳಿದ್ದೇನೆ.